ಸಾಕ್ಷಿಯನ್ನು ತಾಃ 10.09.2023 ರಂದು ಕರೆದು ಪ್ರಮಾಣ ಮಾಡಿಸಲಾಯಿತು ಪಿಡಬ್ಲ್ಯೂ-3

ಮುಖ್ಯ ವಿಚಾರಣೆಃ- ವಾದಿ ಪರ ವಕೀಲರರಿಂದಃ -

ನಾನು ನನ್ನ ಮುಖ್ಯ ವಿಚಾರಣೆಯನ್ನು ನನ್ನ ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿರುವ ವಿಚಾರಗಳು ಸತ್ಯವಾಗಿರುತ್ತದೆ. ನಾನು ಅದನ್ನು ನನ್ನ ವಕೀಲರಿಗೆ ಖುದ್ದಾಗಿ ಹೇಳಿ ತಯಾರು ಮಾಡಿಸಿರುತ್ತೇನೆ.

ಸಾಕ್ಷಿಗೆ ದಿನಾಂಕ 28.11.2019 ರ ಪ್ರಾಮಿಸರಿ ಪತ್ರ ಹಾಗೂ ಹಣಸಂದ ರಶೀದಿಯನ್ನು ತೋರಿಸಲಾಗಿ ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿರುತ್ತಾರೆ, ಅವುಗಳನ್ನು ಈಗಾಗಲೇ ನಿ.ಪಿ-1 ಮತ್ತು 2 ಎಂದು ಗುರುತಿಸಲಾಗಿದೆ. ನಿ.ಪಿ-1 ಮತ್ತು 2 ರಲ್ಲಿ ಸಾಕ್ಷಿಯು ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿ.ಪಿ-1 (ಬಿ) ಮತ್ತು 2 (ಬಿ) ಎಂದು ಗುರುತಿಸಲಾಗಿದೆ ನಿ.ಪಿ-1 ಮತ್ತು 2 ನ್ನು ಪ್ರತಿವಾದಿಯು ವಾದಿಗೆ ನನ್ನ ಸಮಕ್ಷಮ ಬರೆದುಕೊಟ್ಟಿರುತ್ತಾರೆ.

**ಪಾಟೀ ಸವಾಲು: ಪ್ರತಿವಾದಿಗಳು ಏಕಪಕ್ಷೀಯವಾದ ಕಾರಣ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

1 ನೇ ಅಪರ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ
**ಮಳವಳ್ಳಿ**_